# ಹಾಲು ಉಕ್ಕಿತೋ ರಂಗ ಹಾದಿಯ ಬಿಡೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 607.
2. **Note:** This song is not available in other standard books that I refer.
3. **Note:** Singer has followed these lyrics.

ರಾಗ: ಪುನ್ನಾಗವರಾಳಿ ತಾಳ: ಅಟ

ಹಾಲು ಉಕ್ಕಿತೋ ರಂಗ ಹಾದಿಯ ಬಿಡೊ || ಪ ||
ಹಾಲು ಬೇಕೇನೋ ನಿನಗೆ ಸೆರಗ ಬಿಡೊ || ಅಪ ||

ಕರವ ಪಿಡಿದರೆನ್ನ ನೌರಸ ಮುತ್ತಿನ
ಸರಗಳು ಹರಿದಾವು ಮುಟ್ಟದಿರೊ ರಂಗ
ಭರದಿ ಮುದ್ದು ಕೊಡುವರೇನೊ ಅತ್ತತ್ತ
ಸರಿಯೋ ನಮ್ಮವರು ಕಂಡಾರು ಕೃಷ್ಣ || 1 ||

ಪುರುಷನುಳ್ಳವಳು ನಾ ಪುರುಷರು ಕೇಳ್ಯಾರು
ಗುರುತು ಕಂಡರೆ ಕೊಲೆಯ ಕೊಂದಾರು
ಸರಸವಾಡಲು ಬೇಡ ಸಡಿಲೋವು ಮುಡಿ ಹುವ್ವು
ಸುರತ ಬೇಕಾದರೆ ಬರುವೆ ವನದೊಳಗೆ || 2 ||

ತಟ್ಟನೆ ತುಟಿಯ ಚುಂಬಿಸುವರೇನೊ ನೀನು
ರಟ್ಟು ಮಾಡದಿರೊ ರಾಜ್ಯದೊಳಗೆ
ಗುಟ್ಟಿನಿಂದಲಿ ತವಕದಿ ಎನ್ನ ಕೂಡೊ
ಅಟ್ಟಹಾಸದಿ ಮೆರೆವ ಪುರಂದರ ವಿಠಲ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಅತ್ತತ್ತ** = ಪಕ್ಕಕ್ಕೆ

**ಸುರತ** = ಒಳ್ಳೆಯದರಿಂದ ಪಡುವ ಆನಂದ, ಮಹದಾನಂದ, ರತಿಕ್ರೀಡೆ, ಕಾಮಕೇಳಿ

**Classification:** Keerthane
**Ankita:** purandara vittala
**Location:** NA
**Category:** Krishna Stuti
**Sub-Category:** Krishna, gopi, halu, dari, ranga, kai, kollu, kaadu, desha,
**Pravachana:** NA
**Explanation:** NA